ಅವರು ರಜೆ ಹೋಗುವುದಕ್ಕೆ ಸ್ವಲ್ಪ ದಿವಸ ಎಂದು ಹೇಳುತ್ತಾರೆ. ನೀವು ಹಳ್ಳಿಗೆ ವರ್ಗ ಮಾಡಿರುತ್ತೀರಿ. ಅವನ ವರ್ಗಾವಣೆಯಾಗಿ 6 ತಿಂಗಳಾದರೂ ಬೆಂಗಳೂರಿನಲ್ಲಿಯೇ ಕುಳಿತಿರುತ್ತಾನೆ. 6 ತಿಂಗಳ ಕಾಲ ವೈದ್ಯರ ಹುದ್ದೆ ಹಾಗೆಯೇ ಖಾಲಿ ಇರುತ್ತದೆ.

(ಗೊಂದಲ)

ಶ್ರೀ ಚಿಕ್ಕನಗೌಡ್ರ ಸಿದ್ದನಗೌಡ ಈಶ್ವರಗೌಡ: ಮಾನ್ಯ ಉಪಾಧ್ಯಕ್ಷರೆ, ಒಂದು ವಿಷಯ ಕೇಳುವುದಕ್ಕೆ ಅವಕಾಶ ಕೊಡಿ.

ಉಪಾಧ್ಯಕ್ಷರು: ಮಾನ್ಯ ಸುಬ್ರಮಣ್ಯ ನಾಯ್ಡುರವರನ್ನು ತಮ್ಮ ಪ್ರಶ್ನೆ ಕೇಳಿ. ತಾವು ಕುಳಿತುಕೊಳ್ಳಿ. ಈಗ ಮಾನ್ಯ ಸುಬ್ರಮಣ್ಯ ನಾಯ್ಡುರವರನ್ನು ಕರೆದಿದ್ದೇನೆ. ನೀವು ಮಾತನಾಡುವುದು record ಗೆ ಹೋಗುವುದಿಲ್ಲ.

(ಗೊಂದಲ)

ಉಪಾಧ್ಯಕ್ಷರು: ಆಗುವುದಿಲ್ಲ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಚಿಕ್ಕನಗೌಡ್ರ ಸಿದ್ದನಗೌಡ ಈಶ್ವರಗೌಡ: ಅತೀ ಮಹತ್ವ ಪೂರ್ಣವಾದಂಥ ಈ ಒಂದು ಇಲಾಖೆಯಲ್ಲಿ .....

(ಗೊಂದಲ)

ಉಪಾಧ್ಯಕ್ಷರು: ಮಾನ್ಯ ಚಿಕ್ಕನಗೌಡ್ರೆ, ನಾನು ಹೇಳುವುದನ್ನು ಸ್ವಲ್ಪ ಕೇಳಿ. ನಿಮ್ಮ ಭಾಷೆಯೇ ನಮಗೆ ಅರ್ಥವಾಗುವ ಹಾಗಿಲ್ಲ.

(ಗೊಂದಲ)

ಶ್ರೀ ಚಿಕ್ಕನಗೌಡ್ರ ಸಿದ್ದನಗೌಡ ಈಶ್ವರಗೌಡ: ಮಾನ್ಯ ಉಪಾಧ್ಯಕ್ಷರೆ, ದಯಮಾಡಿ ಎರಡು ನಿಮಿಷ ಮಾತನಾಡುವುದಕ್ಕೆ ನನಗೆ ಅವಕಾಶ ಕೊಡಿ.

ಉಪಾಧ್ಯಕ್ಷರು: ನಿಮಗೆ ಆಮೇಲೆ ಅವಕಾಶ ಕೊಡುತ್ತೇನೆ. ಆಗ ನೀವು ಮಾತನಾಡಿ. ಆಮೇಲೆ ಕೇಳಿ. ಈಗ ಬೇಡ. ನಮಗೆ ಅದೃಷ್ಟ, star ನಿಂದ ಸಿಕ್ಕಿದೆ. ನಮ್ಮ ಪ್ರಶ್ನೆ ಬಂದಿದೆ. ನೀವೇನಾದರೂ ಮಾಡಿ ಒಂದು ಅವಕಾಶ ಕೊಡಿ ಎಂದು ನೀವೇ ಹೇಳುತ್ತೀರಿ. ಪಾಪ, ಅವರಿಗೆ star ಸಿಕ್ಕಾಗ ಮಾತನಾಡಿ ಎಂದು ಹೇಳಿದರೆ ಮಧ್ಯೆ ಮಧ್ಯೆ ನೀವು ಎದ್ದೆದ್ದು ಅವರಿಗೆ ಹಿಂಸೆ ಮಾಡುತ್ತೀರಿ. ಇವರದ್ದು ಆಗಲಿ ಚಿಕ್ಕನಗೌಡ್ರೆ, ಆಮೇಲೆ ನಿಮಗೆ ಅವಕಾಶ ಕೊಡುತ್ತೇನೆ.

ಬೆಂಗಳೂರಿನ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯನ್ನು ದೆಹಲಿಯ ಎಮ್ಸ್ ದರ್ಜೆಗೆ ಏರಿಸುವುದು.

657 (6516) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ): ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2005–06ರಲ್ಲಿ ಬೆಂಗಳೂರಿನ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡಿರುವ ಹಾಗೂ ಕೈಗೊಳ್ಳಲಿರುವ ಕ್ರಮಗಳೇನು;

ಆ) ಇದಕ್ಕಾಗಿ ಖರ್ಚು ಮಾಡುವ ಹಣವೆಷ್ಟು;

ಇ) 2005–06ರಲ್ಲಿ ಹೊಸದಾಗಿ ಪ್ರಾರಂಭಿಸಿರುವ ಕಾಮಗಾರಿಗಳು ಯಾವುವು;

ಈ) ಈ ಆಸ್ಪತ್ರೆಯನ್ನು ದೆಹಲಿಯ ಅಖಿಲ ಭಾರತ ವೈದ್ಯಕೀಯ ಸಂಸ್ಥೆ (ಎಮ್ಸ್) ಮಾದರಿ ಅಭಿವೃದ್ಧಿಗೊಳಿಸಲು ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ಇಕ್ಬಾಲ್ ಅನ್ಸಾರಿ (ವೈದ್ಯಕೀಯ ಶಿಕ್ಷಣ ಸಚಿವರು)

ಅ) 1. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ತುರ್ತು ಚಿಕಿತ್ಸಾ ವಿಭಾಗದ ಕಟ್ಟಡವನ್ನು ನಿರ್ಮಿಸಲಾಗುತ್ತಿದೆ.

2. ಹಳೇ ಕಟ್ಟಡಗಳ ನವೀಕರಣ ಮತ್ತು ಹೊಸ ಕಟ್ಟಡಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ.

ಆ) ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಇ) ವಾರ್ಡುಗಳು ಮತ್ತು ಹೊಸ ವೈದ್ಯಕೀಯ ವಿಭಾಗಗಳ ಕಾಮಗಾರಿಗಳು.

ಈ) ಇಲ್ಲ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಮಾನ್ಯ ಉಪಾಧ್ಯಕ್ಷರೆ, ಬೆಂಗಳೂರಿನ ಬೌರಿಂಗ್ ಆಸ್ಪತ್ರೆಯ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು? ಅಂತ ನಾನು ಪ್ರಶ್ನೆ ಕೇಳಿದ್ದೆ. ಇದರಲ್ಲಿ ಕೇವಲ 'ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕಟ್ಟಡವನ್ನು ನಿರ್ಮಿಸಲಾಗುತ್ತಿದೆ' ಎಂದು ಹೇಳಿದ್ದಾರೆ ಮತ್ತು 'ಹಳೆ ಕಟ್ಟಡಗಳ ನವೀಕರಣ ಮತ್ತು ಹೊಸ ಕಟ್ಟಡಗಳನ್ನು ನಿರ್ಮಿಸಲು ಉದ್ದೇಶಿಸಿಲಾಗಿದೆ' ಎಂದು ಹೇಳಿ ಉತ್ತರ ಕೊಟ್ಟಿದ್ದಾರೆ. ಕೇವಲ ಕಟ್ಟಡಗಳಿಂದ ರೋಗಿಗಳಿಗೆ ಬೇಕಾಗಿರುವಂಥ ಸವಲತ್ತುಗಳು ಸಿಗುತ್ತವೆಯೇ? ಇದೂ ಒಂದು ಭಾಗ. ಆದರೆ, ಇವತ್ತು ಅಲ್ಲಿ ಸಿ.ಟಿ. ಸ್ಕ್ಯಾನಿಂಗ್ ಇಲ್ಲ, ಎಂಆರ್ಐ ಇಲ್ಲ. ಅದಲ್ಲದೆ, ಕ್ಯಾನ್ಸರ್‌ಗೆ ಬರುವಂಥ ಬಡ ರೋಗಿಗಳಿಗೆ ಮೆಮೋಗ್ರಫಿ ಮಾಡಲಿಕ್ಕೆ ಮಿಷನ್ ಇಲ್ಲ ಮತ್ತು ಡಯಾಲಿಸಿಸ್ ಮಾಡುವುದಕ್ಕೆ ಹೆಚ್ಚಿನ ಮಿಷನ್ಸ್ ಇಲ್ಲ. ಅದನ್ನು ಅಭಿವೃದ್ಧಿಪಡಿಸಲಿಕ್ಕೆ, ಆ ಮಿಷನ್ಸ್ ಹೆಚ್ಚಾಗಿ ಒದಗಿಸಲಿಕ್ಕೆ ಸರ್ಕಾರವೇನು ಕ್ರಮ ತೆಗೆದುಕೊಂಡಿದೆ? ಅದಲ್ಲದೆ, ಈಗ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಎಷ್ಟು ಹಣದಲ್ಲಿ ತಾವು ಅಲ್ಲಿ ಆ ಕಟ್ಟಡವನ್ನು ನಿರ್ಮಾಣ ಮಾಡುತ್ತಿದೀರಿ? ಯಾವಾಗ ಪ್ರಾರಂಭ ಮಾಡಿದಿರಿ? ಯಾವಾಗ ಅದನ್ನು ಮುಗಿಸುತ್ತೀರಿ? ಇದನ್ನು ದಯವಿಟ್ಟು ತಿಳಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಇಕ್ಬಾಲ್ ಅನ್ಸಾರಿ: ಮಾನ್ಯ ಸದಸ್ಯರಾದ ಕಟ್ಟಾ ಸುಬ್ರಹ್ಮಣ್ಯನಾಯ್ಡುರವರು ಬೌರಿಂಗ್ ಆಸ್ಪತ್ರೆಯ ಬಗ್ಗೆ ಬಹಳ ಕಳಕಳಿ ಹೊಂದಿ ಒಂದು ಪ್ರಶ್ನೆಯನ್ನು ಕೇಳಿದ್ದಾರೆ. ಇದು ಬಹಳ ಪ್ರಸ್ತುತವಾದ ಪ್ರಶ್ನೆ ಇದೆ. ಆದರೆ, ಈಗಾಗಲೇ ನಾನು ಉತ್ತರದಲ್ಲಿ ಹೇಳಿದ ಪ್ರಕಾರ, ಬಿಡಿಎ ವತಿಯಿಂದ ಅಲ್ಲಿ ತುರ್ತು ಚಿಕಿತ್ಸಾ ವಿಭಾಗವನ್ನು ದೆಹಲಿಯ ಅಖಿಲ ಭಾರತ ವೈದ್ಯಕೀಯ ಸಂಸ್ಥೆ ಮಾದರಿಯಲ್ಲಿ ಹಾಗೂ ಎಂಸಿಐ ಪ್ರಕಾರ ಕಟ್ಟಡ ನಿರ್ಮಾಣ ಮಾಡಲಾಗುತ್ತಿದೆ. ಅದು ಸುಮಾರು 10 ಕೋಟಿ ರೂಪಾಯಿ ವೆಚ್ಚದಲ್ಲಿ ಆ ಕಾಮಗಾರಿಯನ್ನು ಮಾಡಲಾಗುತ್ತಿದೆ. ಎರಡನೆಯದಾಗಿ, ಮೊನ್ನೆ ತಾನೆ ವಿಕ್ಟೋರಿಯಾ ಮತ್ತು ಬೌರಿಂಗ್ ಆಸ್ಪತ್ರೆಗಳ ಬಗ್ಗೆ ಈ ಹಿಂದಿನ ಸದನದಲ್ಲಿ ಮಾನ್ಯ ಸದಸ್ಯರುಗಳು ಪ್ರಶ್ನೆ ಮಾಡಿದ್ದರು. ವಿಕ್ಟೋರಿಯಾ ಮತ್ತು ಬೌರಿಂಗ್ ಆಸ್ಪತ್ರೆ ಅಲ್ಲಿ ಸ್ವಲ್ಪ ಮಾಡಿಫೈ ಮಾಡಬೇಕಾಗಿದೆ. ನವೀಕರಣ ಮಾಡಬೇಕಾಗಿದೆ ಅಂತ ಹೇಳಿ. ಅದರ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಹೇಳಿದರು. 1ನೇ ತಾರೀಖು ಆಗಸ್ಟ್‌ಗೆ ನಾವು ಹೈ ಲೆವೆಲ್

ಮೀಟಿಂಗ್ ಕರೆಯುತ್ತಿದ್ದೇವೆ ಎಂದು. ಅದರ ಪ್ರಕಾರ, ಮೀಟಿಂಗ್ ಕರೆದಿದ್ದೆವು. ಆ ಮೀಟಿಂಗ್‌ನಲ್ಲಿ ಚರ್ಚೆಯಾಗಿ ಸುಮಾರು 63 ಕೋಟಿ ರೂಪಾಯಿನಷ್ಟು ಪಟ್ಟಿಯನ್ನು, ಮಾಸ್ಟರ್ ಪ್ಲಾನ್ ಅನ್ನು ತಯಾರು ಮಾಡಿ, ಪ್ರಾಜೆಕ್ಟ್ ಅನ್ನು ತಯಾರು ಮಾಡಿ ಲೋಕೋಪಯೋಗಿ ಇಲಾಖೆ ವತಿಯಿಂದ ಸರ್ಕಾರಕ್ಕೆ ಸಲ್ಲಿಸಿದ್ದೇವೆ. ಆದಷ್ಟು ಬೇಗ ಅದರಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ. ಎರಡನೆಯದಾಗಿ, ಇಕ್ವಿಪ್‌ಮೆಂಟ್ಸ್ ಬಗ್ಗೆ, ಸಿ.ಟಿ. ಸ್ಕ್ಯಾನ್ ಬಗ್ಗೆ, ಇನ್ನು ಬೇರೆ ಬೇರೆ ಇಕ್ವಿಪ್‌ಮೆಂಟ್ಸ್ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಅದು ತಕ್ಷಣ ನೋಡಿಕೊಂಡು ಅದರ ಮೇಲೆ ಕ್ರಮ ಕೈಗೊಳ್ಳಲಾಗುತ್ತದೆ.

ಶ್ರೀ ಆರ್. ಅಶೋಕ್: 'ನಾವು ಬಿಡಿಎನಿಂದ ಮಾಡುತ್ತೇವೆಂದು' ಹೇಳಿದರು. ಆದರೆ, ಬಿಡಿಎನಿಂದ ಅದಕ್ಕೇನೂ ಎಸ್ಟಿಮೇಟ್ ಮಾಡಿಲ್ಲ, ಅದಕ್ಕೆ ಟೆಂಡರ್ ಕರೆದಿಲ್ಲ, ಏನೂ ಕರೆದಿಲ್ಲ. ಅದನ್ನು ಯಾವಾಗ ಮಾಡುತ್ತೀರಿ? ಯಾವಾಗ ಪ್ರಾರಂಭ ಮಾಡುತ್ತೀರಾ? ಅಖಿಲ ಭಾರತ ವೈದ್ಯಕೀಯ ಮಂಡಳಿ ತರಹ ಮಾಡುತ್ತೇನೆಂದು ಹೇಳಿದ್ದೀರಿ. ನಮ್ಮ ಒಬ್ಬ ಕಾರ್ಯಕರ್ತನ ಮಗಳಿಗೆ ಕಣ್ಣಿನ ಕ್ಯಾನ್ಸರ್ ಬಂದಿತ್ತು. ನಾನೇ ಪರ್ಸನಲ್ ಆಗಿ, ಆಕೆಯನ್ನು ಮಿಂಟೋ ಆಸ್ಪತ್ರೆಗೆ ಕಳುಹಿಸಿದರೆ, ಕಣ್ಣು ನಮ್ಮದೇ, ಹೊರತು ಕ್ಯಾನ್ಸರ್ ನಮ್ಮದಲ್ಲವೆಂದು ಕಳುಹಿಸಿದರು. ಸರಿ, ನಾನು ವಿಕ್ಟೋರಿಯಾಗೆ ಕಳುಹಿಸಿದೆ. ವಿಕ್ಟೋರಿಯಾದವರು ಇದು ನಮಗೆ ಬರುವುದೇ ಇಲ್ಲ ಎಂದರು. ನಂತರ ಕ್ಯಾನ್ಸರ್ ಹಾಸ್ಪಿಟಲ್‌ಗೆ ಹೋದರೆ, ಆ ಕ್ಯಾನ್ಸರ್ ಹಾಸ್ಪಿಟಲ್‌ನವರು ಇಲ್ಲ. ಇಲ್ಲ ಅವರು ತಪ್ಪು ಮಾಡಿದ್ದಾರೆ, ಕಣ್ಣು ನನಗೆ ಬರುವುದಿಲ್ಲ. ನೀವು ಮತ್ತೆ ಅಲ್ಲಿಗೇ ಹೋಗಿ ಅನ್ನುತ್ತಾರೆ. ನನ್ನ ಸ್ವತಃ ಅನುಭವವನ್ನು ನಾನು ಹೇಳಿದೆ. ನಾನೇ ಫೈಲ್ ಹಿಡಿದುಕೊಂಡು ಸುತ್ತಿದ್ದೇನೆ. ಕೊನೆಗೆ ಎಲ್ಲ ಕಡೆಗೆ ತಿರುಗಿ ತಿರುಗಿ ನನ್ನ ಕೈಯಲ್ಲಿ ಏನೂ ಮಾಡಲಿಕ್ಕೆ ಆಗದೆ, ಖಾಸಗಿಯಾದ ಜೈನ್ ಆಸ್ಪತ್ರೆಗೆ ಕಳುಹಿಸಿ ಟ್ರೀಟ್‌ಮೆಂಟ್ ಕೊಡಿಸುತ್ತಿದ್ದೇನೆ. ಅಂದರೆ ಇದು ನಮ್ಮ ಸ್ಥಿತಿ. ಪ್ರತಿಯೊಬ್ಬರಿಗೆ ಯಾರೇ ಆಗಲಿ ತಲೆಗೆ ಏಟು ಬೀಳಲಿ ಅಲೆಸುತ್ತಾರೆ. ಅವನು ಸತ್ತ ಮೇಲೆ ಅವನ ಬಾಡಿ ಕೊಡುವುದಕ್ಕಷ್ಟೆ. ಅವರು ದುಡ್ಡು ಪಡೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತಾರೆಯೇ ಹೊರತು ಅವನಿಗೆ ಏಟು ಬಿದ್ದ ತಕ್ಷಣ ಹೋದರೆ ಅವನಿಗೆ ಟ್ರೀಟ್‌ಮೆಂಟ್ ಸಿಗುವುದಿಲ್ಲ. ಅದಕ್ಕೋಸ್ಕರ, ವೈದ್ಯಕೀಯವಾಗಿ ನೀವು ಏನು ಡೆಲ್ಲಿ ಮಾದರಿಯಲ್ಲಿ ಮಾಡಬೇಕೆಂದು ಇದ್ದೀರಿ. ಕೂಡಲೇ ಅದನ್ನು ಮಾಡಿದರೆ, ಜನರಿಗೆ, ರೋಗಿಗಳಿಗೆ ಉಪಯೋಗವಾಗುತ್ತದೆ. ದಯವಿಟ್ಟು, ಈ ರೀತಿಯಾಗಿ ಅಲೆಸುವುದನ್ನು ತಪ್ಪಿಸಬೇಕು.

ಶ್ರೀ ನೆ.ಲ. ನರೇಂದ್ರ ಬಾಬು: ಬೆಂಗಳೂರು ನಗರದಲ್ಲಿ ಸುಮಾರು 75 ಲಕ್ಷ ಜನ ಇದ್ದಾರೆ. ಅದರಲ್ಲಿ ಕಾರ್ಮಿಕ ವರ್ಗ, ಬಡವರ್ಗ ಬಹಳಷ್ಟಿದೆ. ಇದರಲ್ಲಿ, ಕೆ.ಸಿ. ಜನರಲ್ ಆಸ್ಪತ್ರೆ, ವಿಕ್ಟೋರಿಯಾ ಆಸ್ಪತ್ರೆ, ಮಿಂಟೋ ಆಸ್ಪತ್ರೆ, ಬೌರಿಂಗ್ ಆಸ್ಪತ್ರೆ ಇವುಗಳಲ್ಲಿ ಬಹಳಷ್ಟು ನಂಬಿ ಬಡವರು ಅನಿವಾರ್ಯವಾಗಿ, ಅವರು ಖಾಸಗಿ ನರ್ಸಿಂಗ್ ಹೋಂಗಳಿಗೆ ಹೋಗುವುದಕ್ಕಾಗದೆ ಅವನ್ನೇ ಅವಲಂಬಿಸಬೇಕಾಗಿದೆ. ಮಾನ್ಯ ಸಚಿವರು ಕಳೆದ ಸಭೆಯಲ್ಲೂ ಸಹ ಆಶ್ವಾಸನೆಯನ್ನು ಕೊಟ್ಟಿದ್ದರು. ನಗರದ ಆಸ್ಪತ್ರೆಗೆ ಸಂಬಂಧಪಟ್ಟ ಹಾಗೆ, ವಿಶೇಷವಾದ ಸಭೆ ಕರೆಯುತ್ತೇವೆಂದು ಹೇಳಿದ್ದರು. ಮೊನ್ನೆ ನಾನು ಆಕಸ್ಮಿಕವಾಗಿ ವಿಕ್ಟೋರಿಯಾ ಆಸ್ಪತ್ರೆಯ ತುರ್ತು ಚಿಕಿತ್ಸಾ ವಿಭಾಗಕ್ಕೆ ಹೋಗಿದೆ. ಆ ಬೆಡ್‌ಗಳು, ಆ ಕಾಟ್‌ಗಳು, ಆ ಸಿತಿಗಳನ್ನು ನೋಡಿದರೆ, ಬಹುಶಃ ಆಸ್ಪತ್ರೆಗೆ

ಹೋಗಲಿಕ್ಕೆ ಜನ ಹೆದರುತ್ತಾರೆ. ದಯಮಾಡಿ ನಾನು ಹೇಳುತ್ತೇನೆ. ಬೆಂಗಳೂರು ನಗರ ಐಟಿ ಸಿಟಿ, ಬಿಟಿ ಸಿಟಿ, ಎಂದೆಲ್ಲಾ ನಾವೆಲ್ಲಾ ಕರೆಯುತ್ತೇವೆ. ಬಡವರು ಅವಲಂಬಿಸಿರತಕ್ಕಂಥ, ಈ ಆಸ್ಪತ್ರೆಗಳ ತುರ್ತು ಚಿಕಿತ್ಸೆಗೆ ದಯಮಾಡಿ ವಿಶೇಷ ಸಭೆ ಕರೆಯಬೇಕೆಂದು ಈ ಸಭೆಯಲ್ಲಿ ತಮ್ಮ ಮುಖೇನ ವಿನಂತಿ ಮಾಡುತ್ತೇನೆ.

ಶ್ರೀ ಎಂ.ಕೆ. ಸೋಮಶೇಖರ: ಮಾನ್ಯ ಉಪಾಧ್ಯಕ್ಷರೇ, ಮೈಸೂರು ಕೆ.ಆರ್. ಆಸ್ಪತ್ರೆಯಲ್ಲಿ ಬಹಳಷ್ಟು ಅವ್ಯವಸ್ಥೆಯಾಗಿದೆ. ಅವರೂ ಕೂಡ ಭೇಟಿ ಕೊಟ್ಟಿದ್ದಾರೆ. ಹೃದಯ ಕಾಯಿಲೆಗಳಿಗೆ ಸಂಬಂಧಪಟ್ಟ ಹಾಗೆ, ಎಲ್ಲಾ ಪೂರ್ತಿ ಹೊಸದಾಗಿ ಮಿಷನರಿ ಎಲ್ಲಾ ರೆಡಿ ಮಾಡುತ್ತೇವೆ. ಎಲ್ಲಾ ವ್ಯವಸ್ಥೆ ಮಾಡುತ್ತೇವೆಂದು ಹೇಳಿದರು. ಅದೂ ಕೂಡ ಇನ್ನೂ ಏನೂ ಆಗಿಲ್ಲ. ಸಾಕಷ್ಟು ಆಪರೇಷನ್ ಮಾಡತಕ್ಕಂಥವರು, ಸ್ಪೆಷಲಿಸ್ಟ್ ಡಾಕ್ಟರ್ಸ್‌ನ್ನು ಕೂಡ ಹೊಸದಾಗಿ ಹಾಕುತ್ತೇವೆಂದು ಹೇಳಿದ್ದರು. ಅವರನ್ನೂ ಕೂಡ ಹಾಕಿಲ್ಲ. ದಯಮಾಡಿ ಅದಕ್ಕೆ ವ್ಯವಸ್ಥೆ ಮಾಡತಕ್ಕಂಥ ಒಂದು ಪ್ರಯತ್ನ ನಡೆಯಲಿ. ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ಕೂಡ ಸುಸಜ್ಜಿತವಾಗಿ ಬೇರೆ ಬೇರೆ ಅವಕಾಶಗಳನ್ನು ಮತ್ತು ಎಲ್ಲಾ ತರಹದ ಸೌಲಭ್ಯಗಳನ್ನು ಕಲ್ಪಿಸಿ, ಎಲ್ಲಾ ರೀತಿಯಲ್ಲಿ ಬಡವರಿಗೆ ಸಿಗತಕ್ಕಂಥ ಕೆಲಸ ಆಗಬೇಕು. ಆಕ್ಸಿಡೆಂಟ್‌ಗಳಾಗಿ ತಲೆಗೇನಾದರೂ ಪೆಟ್ಟುಗಳಾದರೆ, ತಕ್ಷಣ ಅಲ್ಲಿ ಯಾವುದೇ ವ್ಯವಸ್ಥೆ ಇಲ್ಲ. ನ್ಯೂರೋ ಸರ್ಜನ್ಸ್ ಆಗಲಿ, ಅದಕ್ಕೆ ಬೇಕಾದಂಥ ವ್ಯವಸ್ಥೆಯಾಗಲಿಲ್ಲ. ದಯಮಾಡಿ ಆ ವ್ಯವಸ್ಥೆ ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ನಾನು ಮತ್ತೆ ಮಾನ್ಯ ಮಂತ್ರಿಗಳಲ್ಲಿ ಕೇಳುವುದೇನೆಂದರೆ, ಸಿ.ಟಿ. ಸ್ಕ್ಯಾನ್, ಎಂ.ಆರ್.ಐ., ಡಯಾಲಿಸಿಸ್, ಮೆಮೋಗ್ರಫಿ ಇವೆಲ್ಲಾ ಮಾಡಬೇಕಾದರೆ, ಗ್ರಾಮೀಣ ಪ್ರಾಂತ್ಯದಿಂದ ಹೆಚ್ಚು ಜನ ಬೌರಿಂಗ್ ಆಸ್ಪತ್ರೆಗೆ, ಬೆಂಗಳೂರು ರಾಜಧಾನಿ ಎಂದು ಎಲ್ಲರೂ ಇಲ್ಲಿಗೆ ಬರುತ್ತಾರೆ. ಆದರೆ, ಅವರು ಒಂದು ಚೀಟಿ ಬರೆದು ಕಳಿಹಿಸುತ್ತಾರೆ. 5 ಸಾವಿರ ರೂಪಾಯಿ, 8 ಸಾವಿರ ರೂಪಾಯಿ, 10 ಸಾವಿರ ರೂಪಾಯಿ, 12 ಸಾವಿರ ರೂಪಾಯಿ ಎಂದು ಹೇಳಿ ಹೊರಗಡೆ ನರ್ಸಿಂಗ್ ಹೋಂನಲ್ಲಿ ಚಾರ್ಜ್ ಮಾಡಿಕೊಂಡು ಬಂದಾಗ ಮತ್ತೆ ಅದನ್ನು ಪರಿಶೀಲನೆ ಮಾಡುವಂಥ ವ್ಯವಸ್ಥೆ ಇದೆ. ಅದರ ಬಗ್ಗೆ ತಾವು ತೀವ್ರವಾಗಿ ಪರಿಶೀಲನೆ ಮಾಡಬೇಕು. ಇದನ್ನು ಯಾವತ್ತು ಮಾಡುತ್ತೀರಿ? ಇದರ ಬಗ್ಗೆ ನಿಜವಾದಂಥ ವಿಚಾರವಿದೆ. ತಮ್ಮ ಗ್ರಾಮದಿಂದ, ತಮ್ಮ ಕ್ಷೇತ್ರದಿಂದ ಯಾರಾದರೊಬ್ಬರು ಬಂದರೂ ಕೂಡ ಒಂದು ಸಿ.ಟಿ. ಸ್ಕ್ಯಾನ್ ಮಾಡಬೇಕಾದರೆ, ಒಂದು ಎಂಆರ್‌ಐ ಮಾಡಬೇಕಾದರೆ, ಒಂದು ಮೆಮೋಗ್ರಫಿ ಮಾಡಬೇಕಾದರೆ, ಒಂದು ಡಯಾಲಿಸಿಸ್ ಮಾಡಬೇಕಾದರೆ ಎಷ್ಟು ಹಣ ಖರ್ಚಾಗುತ್ತದೆಂದು ಮಾನ್ಯ ಮಂತ್ರಿಗಳಿಗೂ ಗೊತ್ತು, ತಮಗೂ ಗೊತ್ತು. ಆ ಬಡ ಜನತೆಗೆ ಅದು ಎಟುಕುವುದಿಲ್ಲ. ಮತ್ತೆ ಆಸ್ಪತ್ರೆ ಕಟ್ಟಿರುವ ಉದ್ದೇಶವೇನು? ಇದಕ್ಕೆ ಖರ್ಚು ಮಾಡುವ ಉದ್ದೇಶವೇನು? ನಾನು ಹೇಳುವುದು, ನಿರ್ದಿಷ್ಟವಾದಂಥ ಸಮಯದಲ್ಲಿ ತಾವು ಯಾವತ್ತು ಈ ಒಂದು ಇಕ್ವಿಪ್‌ಮೆಂಟ್ಸ್ ಅನ್ನು ಆಸ್ಪತ್ರೆಗೆ ಒದಗಿಸಿಕೊಡುತ್ತೀರಿ? ಮತ್ತೆ ಹಳೇ ಕಟ್ಟಡ ನವೀಕರಣ ಮಾಡುತ್ತೇವೆಂದು ಹೇಳಿದಿರಿ. ಅದರ ವಿನ್ಯಾಸವೇನು? ಯಾವ ಹಂತದಲ್ಲಿದೆ? ತಾವು 'ಪರಿಶೀಲನೆಯಲ್ಲಿದೆ' ಅಂತ ಉತ್ತರ ಕೊಡುತ್ತೀರಿ; ಈಗ ಸದನದಲ್ಲಿ ಹೇಳುತ್ತೀರಿ, ಒಪ್ಪಿಕೊಳ್ಳುತ್ತೀರಿ,

ಹೋಗುತ್ತೀರಿ, ಮತ್ತೆ ಅಲ್ಲಿ ಹೋದ ಮೇಲೆ ಮತ್ತೆ ಸದನ ಬಂದರೂ ಕೂಡ ಏನೂ ಆಗುವುದಿಲ್ಲ. ಹಿಂದೆ ನಾವು ಜನವರಿಯಲ್ಲಿ ಕೇಳಿದೆವು. ಆಗಲೂ ಕೂಡ ಉತ್ತರ ಸಿಗಲಿಲ್ಲ. ಇದೇ ತರಹ 'ಪರಿಶೀಲನೆಯಲ್ಲಿದೆ' ಎಂದು ಹೇಳಿದಿರಿ.

ಶ್ರೀ ಆರ್. ಅಶೋಕ್: ವಿನ್ಯಾಸ ಏನು ಮಾಡಿದ್ದೀರಿ? .....

(ಗೊಂದಲ)

ಉಪಾಧ್ಯಕ್ಷರು: ಅಶೋಕ್‌ರವರೇ, ನೀವು ಕುಳಿತುಕೊಳ್ಳಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಏಚಿತವಾದಂಥ ಉತ್ತರ ಬೇಕು ಸಾರ್.

ಉಪಾಧ್ಯಕ್ಷರು: ಆಯಿತು. ಕೇಳಿ. ಇಮ್ಮೀಡಿಯೇಟ್ ಆಗಿ ಹೇಳುತ್ತಾರೆ. ಮಂತ್ರಿಗಳು ಉತ್ತರ ಹೇಳಿ.

ಶ್ರೀ ಬಸವರಾಜ ರಾಯರೆಡ್ಡಿ: ಇಷ್ಟು ಉಪ ಪ್ರಶ್ನೆಗಳನ್ನು ಕೇಳಿದರೆ ಮಂತ್ರಿಗಳು ಉತ್ತರ ಕೊಡುವುದಕ್ಕೆ ಸಾಧ್ಯವೇ?

ಉಪಾಧ್ಯಕ್ಷರು: ಆಯಿತು. ಮಂತ್ರಿಗಳು ಉತ್ತರ ಹೇಳಿ. ಕೇಳುವ ಅಭ್ಯಾಸ ಮಾಡಿಕೊಂಡು ಬಿಟ್ಟಿದ್ದಾರೆ.

(ಗೊಂದಲ)

ಶ್ರೀ ಇಕ್ಬಾಲ್ ಅನ್ಸಾರಿ: ಮಾನ್ಯ ಹಿರಿಯ ಸದಸ್ಯರು ಕೇಳಿದ ಪ್ರಕಾರ, ನಾನು ಮುಂಚೆಯೇ ಅವರಿಗೆ ಬಹಳ ಕಳಕಳಿ ಇದೆ ಎಂದು ಹೇಳಿದೆ. ಏಕೆಂದರೆ, ಅವರು ಶಿವಾಜಿನಗರದಿಂದ ಆಯ್ಕೆಯಾಗಿ ಬಂದಿದ್ದಾರೆ. ಅವರ ಪ್ರಕಾರ, ಬೌರಿಂಗ್ ಆಸ್ಪತ್ರೆಯಲ್ಲಿ ಸಿ.ಟಿ. ಸ್ಕ್ಯಾನ್‌ಗೋಸ್ಕರ ಮತ್ತು ಬೇರೆ ಬೇರೆ ಇಕ್ವಿಪ್‌ಮೆಂಟ್‌ಗೋಸ್ಕರ ಅಲ್ಲಿ ಏನಿದೆ, ಏನಿಲ್ಲ ಎಂದು ಹೇಳಿದ್ದಾರೆ. ಆಮೇಲೆ, ಅಲ್ಲಿರತಕ್ಕಂಥ ಡಾಕ್ಟರ್‌ಗಳೇನು ಹೊರಗಡೆ ಕಳುಹಿಸುತ್ತಾರೆ. 5–5 ಸಾವಿರ ರೂಪಾಯಿಗೆ ಆ ಬಿಲ್ ಅನ್ನು ಮಾಡಿಕೊಂಡು ಬರುತ್ತಾರೆ ಎಂದು ತಾವೇನು ಈಗ ಹೇಳಿದಿರಿ ಅದನ್ನು ಪರಿಶೀಲನೆ ಮಾಡುತ್ತೇವೆಂದು ಹೇಳುತ್ತೇನೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಹೊರಗಡೆ ಪ್ರೈವೇಟ್ ನರ್ಸಿಂಗ್ ಹೋಂನಲ್ಲಿ ತಾವು ಹೋದರೂ ಕೂಡ ಅಷ್ಟೇ ಚಾರ್ಜ್ ಮಾಡುತ್ತಾರೆ. ಹೊರಗಡೆ ನರ್ಸಿಂಗ್ ಹೋಂನಲ್ಲಿ ಅವರ ಲೆಕ್ಕಾಚಾರದ ಪ್ರಕಾರ ಅವರು ಮಾಡುತ್ತಾರೆ. ಡಾಕ್ಟರ್ಸ್ ಲಂಚ ತೆಗೆದುಕೊಳ್ಳುತ್ತಿದ್ದಾರೆಂದು ನಾನು ಹೇಳಿಲ್ಲ. ಅದು ತಮ್ಮ ಗಮನಕ್ಕೆ ಬಂದಿದ್ದರೆ ದಯವಿಟ್ಟು ಪರಿಶೀಲನೆ ಮಾಡಿ.

ಶ್ರೀ ಇಕ್ಬಾಲ್ ಅನ್ಸಾರಿ: ಅದನ್ನು ನೋಡಿಕೊಂಡು, ಹೊರಗಡೆ ಚಾರ್ಜ್, ನಮ್ಮ ಗೌರ್ನಮೆಂಟ್ ಆಸ್ಪತ್ರೆ ಚಾರ್ಜ್ ನೋಡಿ ನಾವು ಪರಿಶೀಲನೆ ಮಾಡುತ್ತೇವೆ. ಎರಡನೆಯದಾಗಿ, ಈ ವಿನ್ಯಾಸದ ಬಗ್ಗೆ ಹೊಸ ಕಟ್ಟಡದ ಬಗ್ಗೆ ತಾವು ಕೇಳಿದ್ದೀರಿ. ನಾನು ಈಗ ತಾನೇ ಹೇಳಿದೆ. 1ನೇ ತಾರೀಖಿಗೆ ಹೈ ಲೆವೆಲ್ ಕಮಿಟಿ ಮೀಟಿಂಗ್ ಮಾಡಿದ್ದೇವೆ. ಆ ಮೀಟಿಂಗ್‌ನಲ್ಲಿ ನಾವು ಪ್ರಪೋಸ್ ಮಾಡಿದ್ದೇವೆ. ಪ್ರಪೋಸಲ್ ಏನು ಎಂದರೆ, ಈಗ ಸರ್ಕಾರದ ಮುಂದೆ ಇಟ್ಟಿದ್ದೇವೆ. ಅದಕ್ಕೆ 63 ಕೋಟಿ ರೂಪಾಯಿಗಳ ಪ್ರಪೋಸಲ್ ಅನ್ನು ಕೊಟ್ಟಿದ್ದೇವೆ. ಅದಕ್ಕೆ ಹೊರಗಿನ ಕೆಲವೊಂದು ಕಂಪನಿಯವರೂ ಸಹ ಮುಂದಾಗಿದ್ದಾರೆ. ಉದಾಹರಣೆಗೆ, ಕೆಪಿಟಿಸಿಎಲ್, ಕೆಪಿಸಿ, ಕೆಎಸ್‌ಆರ್‌ಟಿಸಿ, ಬಿಡಿಎನವರು ಇವರ ಕಡೆಯಿಂದ ನಾವು ಸಹಿತ ಹಣವನ್ನು ಒದಗಿಸುತ್ತೇವೆಂದು ಹೇಳಿ ಅವರು

ತಮ್ಮ ಹೇಳಿಕೆಯನ್ನು ಮಾನ್ಯ ಮುಖ್ಯಮಂತ್ರಿಗಳ ಮುಂದಿಟ್ಟಿದ್ದಾರೆ. ಆದಷ್ಟು ಬೇಗ ಅದನ್ನು ಮಾಡಲಾಗುತ್ತದೆ. ಇನ್ನು, ನಮ್ಮ ಮಿತ್ರರಾದಂಥ ಮಾನ್ಯ ಸದಸ್ಯರು ಕೇಳಿದ ಹಾಗೆ, ಬಿಡಿಎ ವತಿಯಿಂದ ಕಾರ್ಯವೇ ಪ್ರಾರಂಭ ಆಗಿಲ್ಲ ಎಂದು ಹೇಳಿದ್ದಾರೆ. ಕಾರ್ಯ ನಡೆಯುತ್ತಿದೆ. ಬೌರಿಂಗ್ ಆಸ್ಪತ್ರೆ ಪಕ್ಕದಲ್ಲಿ ಲೆಫ್ಟ್ ಸೈಡ್ ಬ್ಲಾಕ್ ಏನಿದೆ, ಅಲ್ಲಿ ಬಿಡಿಎ ವತಿಯಿಂದ ಕೆಲಸ ನಡೆಯುತ್ತಿದೆ. ಅದು 10 ಕೋಟಿ ರೂಪಾಯಿ ವೆಚ್ಚದಲ್ಲಿ ನಡೆಯುತ್ತಿದೆ. ಇನ್ನು, ಎರಡನೇ ಪ್ರಶ್ನೆಯನ್ನು ಸ್ನೇಹಿತರು ಕೇಳಿದರು. ಕ್ಯಾನ್ಸರ್‌ಗೋಸ್ಕರ ಮಿಂಟೋ ಆಸ್ಪತ್ರೆಯಲ್ಲಿ ಹೋದರೆ ಅಲ್ಲಿ ಕಣ್ಣು ನಮಗೆ ಸಂಬಂಧವಿಲ್ಲ, ವಿಕ್ಟೋರಿಯಾಗೆ ಹೋಗು ಎನ್ನುತ್ತಾರೆ. ವಿಕ್ಟೋರಿಯಾದಿಂದ ನಮಗೆ ಸಂಬಂಧವಿಲ್ಲ, ಮಿಂಟೋಗೆ ಹೋಗು ಎನ್ನುತ್ತಾರೆ ಎಂದರು. ಕ್ಯಾನ್ಸರ್‌ಗೆ ಸಂಬಂಧಪಟ್ಟಂತೆ ಕ್ಯಾನ್ಸರ್ ಆಸ್ಪತ್ರೆಗೆ ಹೋಗಬೇಕು. ಕ್ಯಾನ್ಸರ್ ಆಗಿದ್ದರೆ ಕಿದ್ವಾಯಿಗೆ ಹೋಗಬೇಕು. ಅದು ಬಿಟ್ಟು ಕಣ್ಣಿನ ಆಸ್ಪತ್ರೆಗೆ ಹೋದರೆ ಸಹಜವಾಗಿ ಡಾಕ್ಟರ್‌ಗಳು ಸರಿಯಾಗಿ ಪರಿಶೀಲನೆ ಮಾಡಿ ಕ್ಯಾನ್ಸರ್ ಎಂದು ಹೇಳುತ್ತಾರೆ. ಅದು ಯಾವ ರೀತಿ ಮಾನ್ಯ ಸದಸ್ಯರಿಗೆ ತಪ್ಪು ಕಲ್ಪನೆಯಾಗಿದೆ ಎಂದು ನಾನು ನೋಡಿಕೊಂಡು ಅದನ್ನು ಪರಿಶೀಲಿಸುತ್ತೇನೆ. ಎರಡನೆಯದಾಗಿ, ನಮ್ಮ ಸ್ನೇಹಿತರಾದ ಮಾನ್ಯ ನರೇಂದ್ರಬಾಬುರವರು ಪ್ರಶ್ನೆ ಕೇಳಿದರು. ಬೆಂಗಳೂರು ನಗರದಲ್ಲಿರತಕ್ಕಂಥ ವಿಕ್ಟೋರಿಯಾ ಆಸ್ಪತ್ರೆ, ಬೌರಿಂಗ್ ಆಸ್ಪತ್ರೆಗಳಲ್ಲಿ ಸಭೆ ನಡೆದಾಗ ಮಾನ್ಯ ಶಾಸಕರಿಗೆ ಆಹ್ವಾನಿಸುತ್ತೇವೆಂದು ಹೇಳಿದ್ದೇವೆ. ಈ ಹಿಂದೆ ನಾನು ಇನ್ಸ್‌ಪೆಕ್ಷನ್‌ಗೆ ಹೋದಾಗ ಮಾನ್ಯ ಸದಸ್ಯರಿಗೆ ಆಹ್ವಾನಿಸಿ ನೋಡಿದೆ. ಆದರೆ ಅವರುಗಳು ತಮ್ಮ ತಮ್ಮ ಕ್ಷೇತ್ರದಲ್ಲಿದ್ದಿರಲಿಲ್ಲ, ಎಲ್ಲೋ ಟೂರಿಗೆ ಹೋಗಿದ್ದರು. ಇಬ್ಬರು, ಮೂವರು ಎಂಎಲ್‌ಎಗಳಿಗೆ ನಾನು ಕೇಳಿದೆ. ಆದ್ದರಿಂದ ನಾನೇ ಇನ್ಸ್‌ಪೆಕ್ಷನ್‌ಗೆ ಹೋಗಿ ನೋಡಿ ಬಂದಿದ್ದೇನೆ. ಕೆಲವೊಂದು ಎಮರ್‌ಜೆನ್ಸಿ ವಾರ್ಡ್‌ನಲ್ಲಿ ಬೆಡ್‌ಗಳ ಸ್ಥಿತಿ, ಆಮೇಲೆ ಬೇರೆ ಬೇರೆ ಸ್ಥಿತಿ ಸರಿಯಾಗಿಲ್ಲವೆಂದು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೆ, ಈ ಬೆಂಗಳೂರು ನಗರದಲ್ಲಿರತಕ್ಕಂಥ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳೇನಾಗಿದ್ದಾವೆ ಇಲ್ಲಿ. ಸುಮಾರು 750 ಬೆಡ್ಸ್, 1000 ಬೆಡ್ಸ್‌ಗಳಿರುತ್ತವೆ. ಆದರೆ ಹೆಚ್ಚಿನ ರೋಗಿಗಳು ಇನ್‌ಪೇಷಂಟ್, ಔಟ್‌ಪೇಷಂಟ್‌ಗಳು ಬರುವುದರಿಂದ ಅದು ಹೆಚ್ಚಿಗೆ ಬಳಕೆಯಾಗಿರುತ್ತದೆ. ಅದನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಪುನಃ ಹೆಚ್ಚಿನ ವ್ಯವಸ್ಥೆಯನ್ನು ಕಲ್ಪಿಸಿಕೊಡಲಾಗುತ್ತದೆಂದು ಈ ಸಂದರ್ಭದಲ್ಲಿ ತಿಳಿಸುತ್ತಾ, ನಮ್ಮ ಸ್ನೇಹಿತರು ಸೋಮಶೇಖರ್‌ರವರು ಮೈಸೂರಿನ ಕೆ.ಆರ್. ಆಸ್ಪತ್ರೆಯ ಬಗ್ಗೆ ಕೇಳಿದರು. ಮೈಸೂರು ಕೆ.ಆರ್. ಆಸ್ಪತ್ರೆಯ ಬಗ್ಗೆ ಅವರು ಹೇಳಿದ್ದು ನಿಜ. ಟೀಚಿಂಗ್ ಸ್ಟ್ಯಾಫ್ ಮತ್ತು ಡಾಕ್ಟರ್‌ಗಳ ಕೊರತೆ ಇತ್ತು. ಆ ಕೊರತೆಗಳನ್ನು ನಿಭಾಯಿಸುವುದಕ್ಕಾಗಿಯೇ 1960ರ ಸೊಸೈಟಿ ಆ್ಯಕ್ಟ್ ಪ್ರಕಾರ ಅಟಾನಮಸ್ ಬಾಡಿಯಾಗಿ ಅದನ್ನು ನಾವು ಮಾಡಿದ್ದೇವೆ. ಮೈಸೂರು ಮೆಡಿಕಲ್ ಕಾಲೇಜ್ ಮತ್ತು ಬೆಂಗಳೂರು ಮೆಡಿಕಲ್ ಕಾಲೇಜ್ ಎಂದು ಏಕೆಂದರೆ, ತುರ್ತಾಗಿ ಅವರು ಅಲ್ಲಿ ಕಾಂಟ್ರಾಕ್ಟ್ ಬೇಸಿಸ್ ಮೇಲೆ ಡಾಕ್ಟರ್ಸ್‌ನ್ನು, ಟೀಚಿಂಗ್ ಸ್ಟ್ಯಾಫ್, ಅಲ್ಲಿ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಶೀಘ್ರದಲ್ಲಿ ಸರ್ಕಾರದ ಒಂದು ಆದೇಶವೂ ಸಹಿತ ಹೊರಬೀಳದಂತೆ ಎಂದು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ನಾನು ತಿಳಿಸಲಿಚ್ಛಿಸುತ್ತೇನೆ.